

ಜೀವನದಲ್ಲಿ ಒಮ್ಮೆಯಾದರೂ ವಿಮಾನಯಾನ ಮಾಡಬೇಕು ಎಂದು ಕನಸು ಕಾಣುವವರ ಸಂಖ್ಯೆ ಈಗ ಕಡಿಮೆಯಾಗುತ್ತಿದೆ. ವಿಮಾನಯಾನ ಕ್ಷೇತ್ರದಲ್ಲಿ ಉಂಟಾದ ತೀವ್ರ ಬೆಳವಣಿಗೆಯಿಂದಾಗಿ ಭಾರತದಲ್ಲಿ ವಾಯುಯಾನ ಕ್ಷೇತ್ರ ಅಗಾಧ ಬೆಳವಣಿಗೆ ಕಂಡಿದೆ. ದೇಶದ ಹೊರಗೆ ಮಾತ್ರವಲ್ಲ, ದೇಶದೊಳಗೂ ವಿಮಾನಗಳ ಹಾರಾಟದ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಬೆಂಗಳೂರಿನಾಚೆಗೆ ಜಿಲ್ಲಾ ಕೇಂದ್ರಗಳಲ್ಲೂ ವಿಮಾನ ನಿಲ್ದಾಣ ಕೇಂದ್ರಗಳು ತಲೆಯೆತ್ತುತ್ತಿವೆ. ಜನಸಾಮಾನ್ಯರ ಮನಸ್ಸಿನಂಗಳದಲ್ಲೂ ವಿಮಾನಗಳ ನೆರಳು ಕಾಣಿಸಿಕೊಂಡಿದೆ.

**ಇ.ಎಸ್. ಸುಧೀಂದ್ರ ಪ್ರಸಾದ್**